ಆ) ಪ್ರಾಥಮಿಕ ಆರೋಗ್ಯ ಘಟಕದ ಕಟ್ಟಡಕ್ಕಾಗಿ 4 ಎಕರೆ ಜಮೀನನ್ನು ಇಂಚಲ ಗ್ರಾಮದ ಬ್ಲಾಕ್ ನಂ. 838 ರಲ್ಲಿ ನೀಡಲು ಒಪ್ಪಿದ್ದಾರೆ.

ಇ) ಇಲ್ಲ, ಜಿಲ್ಲಾ ಪರಿಷತ್ ವತಿಯಿಂದ ಈ ಗ್ರಾಮಕ್ಕೆ ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಮಂಜೂರು ಮಾಡುವ ಬಗ್ಗೆ ಠರಾವು ಬಂದಿರುವುದಿಲ್ಲ.

ಈ) 1990–91ನೇ ಸಾಲಿನಲ್ಲಿ ಆರೋಗ್ಯ ಕೇಂದ್ರವನ್ನು ಮಂಜೂರು ಮಾಡುವ ಬಗ್ಗೆ ಪರಿಶೀಲಿಸಲಾಗುವುದು.

ಆರೋಗ್ಯ ಇಲಾಖೆಯಲ್ಲಿ ಖಾಲಿ ಇರುವ ವೈದ್ಯರ ಹುದ್ದೆಗಳು

554. ಶ್ರೀ ಪಿ.ಜಿ.ಆರ್. ಸಿಂಧ್ಯ (ಕನಕಪುರ) :– ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ ವೈದ್ಯರ ಖಾಲಿ ಹುದ್ದೆಗಳೆಷ್ಟು? (ಜಿಲ್ಲಾವಾರು)

2) ಮಹಿಳಾ ವೈದ್ಯಾಧಿಕಾರಿಗಳು–ಖಾಲಿ ಹುದ್ದೆಗಳ ಸಂಖ್ಯೆ?

3) ಈ ಹುದ್ದೆಗಳನ್ನು ಯಾವಾಗ ಭರ್ತಿ ಮಾಡಲಾಗುವುದು?

4) ಈ ಹುದ್ದೆಗಳನ್ನು ಭರ್ತಿ ಮಾಡದೆ ಇರಲು ವಿಳಂಬಕ್ಕೆ ಕಾರಣ?

ಶ್ರೀಮತಿ ಕೆ.ಎಸ್. ನಾಗರತ್ನಮ್ಮ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವೆಯವರು):–

1) 460, ಜಿಲ್ಲಾವಾರು ವಿವರಗಳನ್ನು ಲಗತ್ತಿಸಿದೆ.

2) 90

3) ಕರ್ನಾಟಕ ಲೋಕಸೇವಾ ಆಯೋಗದಿಂದ ಆಯ್ಕೆ ಪಟ್ಟಿಯನ್ನು ಕಾಯಲಾಗಿದೆ. ಅದು ಬಂದೊಡನೆಯೇ ನೇಮಕಾತಿ ಮಾಡಲಾಗುವುದು.

4) ಮಿತವ್ಯಯ ಧೋರಣೆಯು ಜಾರಿಯಲ್ಲಿ ಇದ್ದುದರಿಂದ ನೇಮಕಾತಿ ಮಾಡಲು ವಿಳಂಬವಾಗಿದೆ.

ಜಿಲ್ಲಾವಾರು ಮಾಹಿತಿ

1)	ಬೆಳಗಾವಿ ಜಿಲ್ಲೆ	22
2)	ಉತ್ತರ ಕನ್ನಡ ಜಿಲ್ಲೆ	39
3)	ಧಾರವಾಡ ಜಿಲ್ಲೆ	17
4)	ಬಿಜಾಪುರ ಜಿಲ್ಲೆ	16
5)	ಗುಲ್ಬರ್ಗ ಜಿಲ್ಲೆ	40
6)	ಬೀದರ್ ಜಿಲ್ಲೆ	23
7)	ರಾಯಚೂರು ಜಿಲ್ಲೆ	18
8)	ಬಳ್ಳಾರಿ ಜಿಲ್ಲೆ	37
9)	ಬೆಂಗಳೂರು ನಗರ	1
10)	ಬೆಂಗಳೂರು (ಗ್ರಾ)	3
11)	ಕೋಲಾರ ಜಿಲ್ಲೆ	11
12)	ತುಮಕೂರು ಜಿಲ್ಲೆ	13
13)	ಚಿತ್ರದುರ್ಗ ಜಿಲ್ಲೆ	24

14) ಶಿವಮೊಗ್ಗ ಜಿಲ್ಲೆ	23
15) ಚಿಕ್ಕಮಗಳೂರು ಜಿಲ್ಲೆ	44
16) ದಕ್ಷಿಣ ಕನ್ನಡ ಜಿಲ್ಲೆ	47
17) ಹಾಸನ ಜಿಲ್ಲೆ	28
18) ಮಡಿಕೇರಿ ಜಿಲ್ಲೆ	24
19) ಮಂಡ್ಯ ಜಿಲ್ಲೆ	13
20) ಮೈಸೂರು ಜಿಲ್ಲೆ	17

ಸರ್ಕಾರಿ ಆಸ್ಪತ್ರೆಯಲ್ಲಿ ಕಳಪೆ ದರ್ಜೆಯ ಔಷಧಿಗಳು

541. ಶ್ರೀ ಆರ್.ವಿ. ದೇಶಪಾಂಡೆ (ಹಳಿಯಾಳ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವೆಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸರ್ಕಾರಿ ಆಸ್ಪತ್ರೆಗಳಲ್ಲಿ ಕಳಪೆ ದರ್ಜೆಯ ಔಷಧಿ ಮತ್ತು ಮಾತ್ರೆಗಳನ್ನು ಜನರಿಗೆ ನೀಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ, ಸರ್ಕಾರದ ಕಳಪೆ ದರ್ಜೆಯ ಔಷಧಿಗಳನ್ನು ಸರಬರಾಜು ಮಾಡಿರುವ ಸಂಸ್ಥೆಗಳ ಮೇಲೆ ಕ್ರಮ ಕೈಗೊಳ್ಳುತ್ತದೆಯೇ?

ಶ್ರೀಮತಿ ಕೆ.ಎಸ್. ನಾಗರತ್ನಮ್ಮ (ಆರೋಗ್ಯ ಸಚಿವೆಯವರು):–

ಅ) ಹೌದು, ಕೆಲವು ಪ್ರಕರಣಗಳಲ್ಲಿ

ಆ) ಹೌದು.

ವಿಕ್ಟೋರಿಯಾ ಆಸ್ಪತ್ರೆಯ ಕಟ್ಟಡದ ವಿಸ್ತಾರದ ಬಗ್ಗೆ

487. ಶ್ರೀ ಕೆ. ಲಕ್ಕಣ್ಣ (ರಾಜಾಜಿನಗರ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) ಬೆಂಗಳೂರು ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಸೇರಿದಂಥ ವಿಸ್ತರಣಾ ಕಟ್ಟಡದ ಕೆಲಸ ಯಾವಾಗ ಪ್ರಾರಂಭವಾಯಿತು ಹಾಗೂ ಇದರ ಅಂದಾಜು ವೆಚ್ಚವೆಷ್ಟು?

2) ಸದರಿ ಕಟ್ಟಡದ ಕೆಲಸ ನಡೆಯುತ್ತಿದೆಯೇ ಅಥವಾ ನಿಂತಿದೆಯೇ? ನಿಂತಿದ್ದರೆ ಯಾವ ಕಾರಣಕ್ಕೋಸ್ಕರ ನಿಂತಿದೆ?

3) ಇದುವರೆಗೆ ಈ ಕಟ್ಟಡದ ನಿರ್ಮಾಣಕ್ಕಾಗಿ ಖರ್ಚು ಮಾಡಿರುವ ಹಣ ಎಷ್ಟು?

4) ಸದರಿ ಕಟ್ಟಡವನ್ನು ಇನ್ನು ಎಷ್ಟು ದಿನಗಳಲ್ಲಿ ಪೂರ್ತಿಗೊಳಿಸಲಾಗುವುದು?

ಶ್ರೀಮತಿ ಕೆ.ಎಸ್. ನಾಗರತ್ನಮ್ಮ (ಆರೋಗ್ಯ ಸಚಿವೆಯವರು):–

1) 1981–82ರಲ್ಲಿ ಪ್ರಾರಂಭವಾಯಿತು. ಇದರ ಅಂದಾಜು ವೆಚ್ಚವು 953–00 ಲಕ್ಷ ರೂಪಾಯಿಗಳು.

2) ಕೆಲಸವು ನಡೆಯುತ್ತಿದೆ. ಗ್ರೌಂಡ್ ಫ್ಲೋರ್ ಬೇಸ್‌ಮೆಂಟ್ ಫ್ಲೋರ್‌ನ ಕೆಲಸವು ಶೇ. 70ರಷ್ಟು ಮುಗಿದಿದ್ದು ಬಾಕಿ ಕೆಲಸಗಳು ನಡೆಯುತ್ತಿವೆ.

3) ಈವರೆಗೆ ಖರ್ಚು ಮಾಡಿರುವ ಹಣ 296–00 ಲಕ್ಷ ರೂಪಾಯಿಗಳು.

4) ಸಾಧ್ಯವಾದಷ್ಟು ಬೇಗ ಪೂರ್ಣಗೊಳಿಸಲಾಗುವುದು.